





ನನ್ನ ಬಗ್ಗೆ ನಿಮಗೆ ತಿಳಿದಿರಬೇಕಲ್ಲ? ನಾನು ಅರ್ಜುನ. ನಾನು ಈ ಬಾರಿಯೂ ನಾಡಹಬ್ಬ ದಸರೆಯಲ್ಲಿ ಚಿನ್ನದ ಅಂಬಾರಿ ಹೊರುತ್ತಿದ್ದೇನೆ. ನನಗೆ ನನ್ನ ಬಗ್ಗೆ ಕೊಂಚ ಹೇಳಿಕೊಳ್ಳಬೇಕು ಅನ್ನಿಸಿದೆ ನೋಡಿ. ನನಗೀಗ 57 ವರ್ಷವಾಗಿಬಿಟ್ಟಿದೆ. ಇನ್ನು ಸ್ವಲ್ಪವೇ ವರ್ಷದಲ್ಲಿ ನಿವೃತ್ತಿಯನ್ನೂ ಪಡೆಯಲಿದ್ದೇನೆ. ಅಷ್ಟರೊಳಗೆ ನನ್ನ ಕತೆಯನ್ನು ನಿಮಗೆ ಹೇಳೋಣ ಎಂಬ ತವಕ ನನ್ನದು.

ಸ್ವಚ್ಛಂದವಾಗಿ ಕಾಡಿನಲ್ಲಿ ತಿರುಗಾಡಿಕೊಂಡಿದ್ದ ಕಾಲ ನನಗೂ ಇತ್ತೆನ್ನಿ. ಆನೆಗಳಿಗೆ ಕಾಡಿನಲ್ಲಿ ಇರುವಷ್ಟು ಆರಾಮು ನಾಡಿನಲ್ಲಿ ಖಂಡಿತ ಸಿಗದು. ಇದು ನನ್ನ 49 ವರ್ಷಗಳ ಅನುಭವ. 1968ರವರೆಗೂ ನಾನು ಕಾಡಿನಲ್ಲಿ ಖುಷಿಯಿಂದ ತಿರುಗಾಡಿಕೊಂಡಿದ್ದೆ. 68ರಲ್ಲಿ ನನ್ನ ಖೆಡ್ಡಾ ಆಪರೇಷನ್ ಮಾಡಿ ಹಿಡಿದುಬಿಟ್ಟರು ನೋಡಿ! ಮನುಷ್ಯರು ತೋಡಿದ್ದ ದೊಡ್ಡ ಗುಂಡಿ ನನ್ನ ಕಣ್ಣಿಗೆ ಕಾಣದೇ ಬಿದ್ದುಬಿಟ್ಟೆ. ಅಲ್ಲಿಂದ ಶುರುವಾಯಿತು ನನ್ನ ಹಾಗೂ ಮನುಷ್ಯರ ನಡುವಣ ಒಡನಾಟ. ಕಾಡಿನಲ್ಲಿ ಕೆಲಸ ಮಾಡುವುದೇನು? ದಿಮ್ಮಿ ಎತ್ತುವುದೇನು? ಅಬ್ಬಾ ಕೆಲಸವೋ ಕೆಲಸ.

ಈ ಖೆಡ್ಡಾ ಆಪರೇಷನ್ ಅನ್ನೋದು, ನಮ್ಮೂರಿನ ಅಣ್ಣ ತಮ್ಮಂದಿರ ವಿದ್ಯೆಯೂ ಅಲ್ಲವಂತೆ! ನನ್ನ ವೈದ್ಯರು ಮಾತನಾಡಿಕೊಳ್ಳುತ್ತಿದ್ದಾಗ ಕೇಳಿಸಿಕೊಂಡಿದ್ದರಿಂದ ತಿಳಿಯಿತು. ಬ್ರಿಟಿಷರು ಇವರಿಗೆ ಈ ವಿದ್ಯೆಯನ್ನು ಹೇಳಿಕೊಟ್ಟರಂತೆ. ದೊಡ್ಡ ಗುಂಡಿಯೊಂದನ್ನು ತೋಡಿ, ಅದರ ಮೇಲೆ ಬಿದಿರಿನ ಗಳಗಳನ್ನು ಇಟ್ಟು, ಸೊಪ್ಪು ಹಾಕಿ ಮುಚ್ಚಿ ಗುಂಡಿ ಕಾಣದಂತೆ ಮಾಡುತ್ತಾರೆ. ನನ್ನತಂಹ ಮುಗ್ಧ ಆನೆಗಳು ಇಲ್ಲಿ ಕಾಲಿಟ್ಟರೆ ಮುಗಿಯಿತು. ಸಾಯುವವರೆಗೂ ಜೀತ ಗ್ಯಾರಂಟಿ.

ಬ್ರಿಟಿಷರು ಕಾಡಿನ ಮರ ಕಡಿದು, ಅದನ್ನು ಸಾಗಿಸಲು ಯಮಸಾಹಸ ಪಡುವ ಬದಲು ಆನೆಗಳನ್ನು ಬಳಸಿಕೊಳ್ಳುತ್ತಿದ್ದರಂತೆ. ಸದ್ಯ ನಾನಂತೂ ಬ್ರಿಟಿಷರ ಕಾಲದವನಲ್ಲ. ಹಾಗಾಗಿ, ಆ ಪಾಡನ್ನು ನಾನು ಕಣ್ಣಾರೆ ಕಂಡಿಲ್ಲ. ಹಾಗೆಂದು ನಾನೇನು ಕಷ್ಟಬಿದ್ದು ದುಡಿಮೆ ಮಾಡಿಲ್ಲ ಎಂದುಕೊಳ್ಳಬೇಡಿ. ನನ್ನಿಂದಲೂ ಮರದ ದಿಮ್ಮಿ ಎತ್ತಿಸುತ್ತಾರೆ. ಆದರೆ, ಈಗ ಕಾಡಲ್ಲಿ ದಿಮ್ಮಿಗಾಗಿ ಮರ ಕಡಿಯುತ್ತಿಲ್ಲವಷ್ಟೇ. ಮಳೆ– ಗಾಳಿಗೆ ಮುರಿದು ಬಿದ್ದ ಮರಗಳನ್ನು ಸಾಗಿಸುವುದು, ದಾರಿಗೆ ಅಡ್ಡ ಬಿದ್ದಿದ್ದರೆ ತೆರವುಗೊಳಿಸುವುದು. ಬೇರೆ ಕಾಡಾನೆಗಳನ್ನು ಹಿಡಿಯಲು ಸಹಾಯ ಮಾಡುವುದು– ಇವೇ ನನ್ನ ಕೆಲಸ. ಇವಿಷ್ಟನ್ನೂ ಮಾಡಿ ದಣಿವಾರಿಸಿಕೊಳ್ಳುವುದು. ಸಂಜೆಯಾದ ಮೇಲೆ ಕಾಡಿನಲ್ಲಿ ತಿರುಗಾಡುತ್ತ, ಸೆರೆಗೂ ಮುಂಚಿನ ಸ್ವಾತಂತ್ರ್ಯದ ದಿನವನ್ನು ನೆನಪಿಸಿಕೊಳ್ಳುವುದು. ಹೀಗಿದೆ ನೋಡಿ, ನನ್ನ ದಿನಚರಿ!

ನಾನು ಹೆಮ್ಮೆಯಿಂದ ಒಂದು ವಿಚಾರ ಹೇಳಿಕೊಳ್ಳಬೇಕು. ನನ್ನ ಜೊತೆ ಇರುವ ಎಲ್ಲ ಆನೆಗಳಿಗಿಂತ ನಾನೇ ಬಲಿಷ್ಠ. ನನ್ನ ತೂಕ ಎಷ್ಟು ಗೊತ್ತೇ ನಿಮಗೆ? ಬರೋಬ್ಬರಿ 5,100 ಕೆ.ಜಿ! ಎನ್ನ ಗಾತ್ರ– ಆಕಾರದ ಬಗ್ಗೆ ತಿಳಿದುಕೊಳ್ಳಿ. 2.95 ಮೀಟರ್ ಎತ್ತರ, 3.75 ಮೀಟರ್ ಉದ್ದ ಇದ್ದೇನೆ. ಬೇರೆ ಯಾವುದಾದರೂ ಆನೆ ಇಷ್ಟಿದ್ದರೆ ಹೇಳಿರಪ್ಪ– ನೀವು ಹೇಳಿದ ಕೆಲಸ ನಾನು ಮಾಡಿಕೊಡುತ್ತೇನೆ. ಅಷ್ಟೇ ಏಕೆ, ಎಲ್ಲ ಆನೆಗಳ ಪೈಕಿ ಅತಿ ಹೆಚ್ಚು ತಾಳ್ಮೆ ಇರುವುದೂ ನನಗೆ ಮಾತ್ರವೇ. ಆದರೆ, ಯಾವುದೋ ವಿಷಮ ಗಳಿಗೆಯನ್ನೇ ದೊಡ್ಡದು ಮಾಡಿಕೊಂಡು ನನಗೆ 'ಕೋಪಿಷ್ಠ' ಎಂಬ ಪಟ್ಟ ಕಟ್ಟಿಬಿಟ್ಟರು. 8 ವರ್ಷ ನನ್ನನ್ನು ದಸರೆಯಿಂದಲೇ ಹೊರಗಿಟ್ಟರು.